692 (1129) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸಾರ್ವಜನಿಕ ಆಸ್ಪತ್ರೆಗಳಿಗೆ ಧಾರಾಳವಾಗಿ ಕಲಬೆರಕೆ ಔಷಧಿ ಸರಬರಾಜಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಇ) ಕಲಬೆರಕೆ ಔಷಧಿ ತಯಾರು ಮಾಡುತ್ತಿರುವವರ ಮೇಲೆ ಇದುವರೆಗೂ ಸರಕಾರ ಕೈಗೊಂಡ ಕ್ರಮಗಳೇನು ?

ಈ) ಪ್ರತಿವರ್ಷ ಎಷ್ಟು ಮೊತ್ತದ ಔಷಧಿಯನ್ನು ಸರಕಾರ ಆಸ್ಪತ್ರೆಗಳಿಗೆ ಖರೀದಿಸಲಾಗುತ್ತಿದೆ , (ವಿವರ ಒದಗಿಸುವುದು)

ಉ) ಯಾವ ವಿಧಾನದ ಮೂಲಕ ಔಷಧಿಯನ್ನು ಖರೀದಿಸಲಾಗುತ್ತಿದೆ ,

ಊ) ಪ್ರತಿವರ್ಷ ಔಷಧಿ ಖರೀದಿಸಲು ಸರಕಾರದಿಂದ ಮೀಸಲಿಟ್ಟಿರುವ ಹಣವೆಷ್ಟು ? (ಸಂಪೂರ್ಣ ವಿವರ ಒದಗಿಸುವುದು)

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಸಾರ್ವಜನಿಕ ಆಸ್ಪತ್ರೆಗಳಿಗೆ ಕಲಬೆರಕೆ ಔಷಧಿ ಸರಬರಾಜಾಗಿರುವುದು ಕಂಡು ಬಂದಿಲ್ಲ

ಆ) ಔಷಧ ಪರಿವೀಕ್ಷಕರು ಹಾಗೂ ಸಹಾಯಕ ಔಷಧ ನಿಯಂತ್ರಕರು ಸರ್ಕಾರಿ ಆಸ್ಪತ್ರೆ ಹಾಗು ಡ್ರಗ್ಸ್ ಲಾಜಿಸ್ಟಿಕ್ ಸೊಸೈಟಿಗಳಿಂದ ಔಷದಿ ಮಾದರಿಗಳನ್ನು ಪಡೆದು ವಿಶ್ಲೇಷಣೆಗೆ ಸಲ್ಲಿಸಿರುತ್ತಾರೆ ಕಲಬೆರಕೆ ಎಂದು ಕಂಡು ಬಂದಲ್ಲಿ, ಔಷಧ ಮತ್ತು ಕಾಂತಿವರ್ಧಕ ಆಧಿನಿಯಮದ ಮೇರೆಗೆ ತಯಾರಕರು ಮತ್ತು ವಿತರಕರ ಮೇಲೆ ಕ್ರಮ ಜರುಗಿಸಲಾಗುವುದು ಕಳೆದ 06 ತಿಂಗಳಿನಲ್ಲಿ ವಿವಿಧ ಆಸ್ಪತ್ರೆಗಳಿಂದ 330 ಔಷಧಿಗಳ ಮಾದರಿ ವಿಶ್ಲೇಷಣೆಗೆ ಪಡೆಯಲಾಗಿದೆ ಹಾಗೂ 58 ಮಾದರಿಗಳು ಉತ್ತಮ ಗುಣಮಟ್ಟದ್ದಲ್ಲವೆಂದು ಕಂಡು ಬಂದಿವೆ ಆದರೆ ಕಲಬೆರಕೆ ಪ್ರಕರಣಗಳು ಕಂಡು ಬಂದಿಲ್ಲ

ಇ) ಇತ್ತೀಚೆಗೆ ಇಂತಹ ಪ್ರಕರಣಗಳು ಕಂಡು ಬಂದಿಲ್ಲ 1995–96ರ ಸಾಲಿನಲ್ಲಿ ಒಂದು ಕಲಬೆರಕೆ ಔಷಧಿ ಮಾರುಕಟ್ಟೆಯಲ್ಲಿ ಕಂಡು ಬಂದಿದ್ದು, ಸದರಿ ಔಷಧಿ ತಯಾರಕರ ವಿರುದ್ಧ ಸಿ ಸಿ ಸಂಖ್ಯೆ 29/98 ಗುಡಿಬಂಡೆ ನ್ಯಾಯಾಲಯ ಮತ್ತು ಸಿ ಸಿ ಸಂಖ್ಯೆ 656/98 ಶಿರಗುಪ್ಪ ನ್ಯಾಯಾಲಯದಲ್ಲಿ ಖಟ್ಲೆಗಳನ್ನು ಹೂಡಲಾಗಿದೆ

ಈ) ಆರೋಗ್ಯ – 2006–07ನೇ ಸಾಲಿಗೆ ರೂ 61,23,73,777/– ಗಳ ಮೌಲ್ಯದ ಔಷಧಿಗಳನ್ನು ಖರೀದಿಸಿ ಪೂರೈಸಲಾಗಿದೆ

2007–08ನೇ ಸಾಲಿಗೆ ರೂ 7,74,45,550/– ಗಳ ಮೌಲ್ಯದ ಔಷಧಿಗಳನ್ನು ಖರೀದಿಸಲಾಗಿದೆ (ದಿನಾಂಕ 16–07–07 ರವರೆಗೆ)

ವೈದ್ಯಕೀಯ ಶಿಕ್ಷಣ 2006–07ನೇ ಸಾಲಿಗೆ ರೂ 19,08,04,192/ – ಗಳ ಮೌಲ್ಯದ ಔಷಧಿಯನ್ನು ಕರೀದಿಸಿ ಪೂರೈಸಲಾಗಿದೆ

2007–08ನೇ ಸಾಲಿಗೆ ರೂ 3,74,83,175/– ಗಳ ಮೌಲ್ಯದ ಔಷಧಿಗಳನ್ನು ಖರೀದಿಸಲಾಗಿದೆ (ದಿನಾಂಕ 16–7–07 ರವರೆಗೆ)

ಉ) ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ಕಾಯ್ದೆ 1999 ನಿಯಮ 2000ರ ಅನ್ವಯ ರಾಷ್ಟ್ರೀಯ ಮಟ್ಟದಲ್ಲಿ ಮೂಲ ಉತ್ಪಾದಕರಿಂದ ಟೆಂಡರ್‌ನ್ನು ಆಹ್ವಾನಿಸಿ ದರಗುತ್ತಿಗೆ ನಿಗದಿಪಡಿಸಿ ರಾಜ್ಯದ ಆರೋಗ್ಯ ಸಂಸ್ಥೆಗಳ ಬೇಡಿಕೆಗನುಗುಣವಾಗಿ ಔಷಧಿಗಳನ್ನು ಖರೀದಿ ಮಾಡಲಾಗುವುದು

ಊ) 2006–07ನೇ ಸಾಲಿನ ಅಯವ್ಯಯದಲ್ಲಿ ಔಷಧಿ ಮತ್ತು ರಾಸಾಯನಿಕಗಳ ಖರೀದಿಯ ಮೊತ್ತದ ವಿವರ

	ಒದಗಿಸಿರುವ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚವಾಗಿರುವ ಅನುದಾನ
ಆರೋಗ್ಯ	70,81,32,600	65,98,07,000	61,23,73,777
ವೈದ್ಯಕೀಯ ಶಿಕ್ಷಣ	19,68,72,200	19,05,18,600	19,08,01,192
ಒಟ್ಟು	90,50,04,800	85,03,25,600	80,31,77,969

2007–08ನೇ ಸಾಲಿನ ಆಯವ್ಯಯದಲ್ಲಿ ಔಷಧಿ ಮತ್ತು ರಾಸಾಯನಿಕಗಳ ಖರೀದಿಯ ಮೊತ್ತದ ವಿವರ (ದಿನಾಂಕ 16–7–2007 ರವರೆಗೆ)

	ಒದಗಿಸಿರುವ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚವಾಗಿರುವ ಅನುದಾನ
ಆರೋಗ್ಯ	77,31,36,400	15,00,00,000	7,74,45,550
ವೈದ್ಯಕೀಯ ಶಿಕ್ಷಣ	20,52,00,000	6,63,56,600	3,74,83,175
ಒಟ್ಟು	97,83,36,400	21,63,56,600	11,49,28,725